FDP No.10/2021
RW-4 ರಂಗಣ್ಣ
Date: 30.06.2026

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ 1 ಮತ್ತು 2 ನೇ ಎದುರುದಾರರ ಪರ ಶ್ರೀ ಜಿ ಜಿ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ**

ನಾನು 1 ಮತ್ತು 2 ನೇ ಎದುರುದಾರರ ತಂದೆಯಾದ ಕದುರಪ್ಪ ರವರಿಗೆ ಹತ್ತಿರದ ಸಂಬಂದಿ ಎಂದರೆ ಸರಿಯಲ್ಲ. ನನಗೆ 3 ನೇ ಎದುರುದಾರರು ಈ ದಿವಸ ನ್ಯಾಯಾಲಯಕ್ಕೆ ಕರೆ ತಂದಿರುತ್ತಾರೆ. ನನಗೆ ಎದುರುದಾರರಿಗೆ ಇರುವ ಜಮೀನುಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಎದುರುದಾರರಿಗೆ ಸೇರಿದ ಜಮೀನು ಬೊಮ್ಮಸಮುದ್ರ ಗ್ರಾಮದ ಲಗತ್ತಾಗಿ ಉತ್ತರ ದಿಕ್ಕಿಗೆ ಇವೆ ಎಂದರೆ ಸರಿ. ಇನ್ನೊಂದು ಜಮೀನು ಕೆ ಎಸ್ ಆರ್ ಟಿ ಸಿ ಡಿಪ್ಪೋ ಬಳಿ ಇದೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರು ಯಾರ ಬಳಿ ಎಷ್ಟು ಸಾಲವನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಾಲವನ್ನು 2020 ರಲ್ಲಿ ಮಾಡಿರುತ್ತಾರೆ. ಅವರು ಯಾರ ಬಳಿ ಸದರಿ ಸಾಲವನ್ನು ಮಾಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ.

ನನಗೆ ಅರ್ಜಿದಾರರಾದ ರಾಮಪ್ಪ ರವರ ಪರಿಚಯವಿದೆ. ಅವರು ನನ್ನ ಸಂಬಂದಿ. ಅರ್ಜಿದಾರರು 1 ಮತ್ತು 2 ನೇ ಎದುರುದಾರರ ತಂದೆಯಾದ ಕದುರಪ್ಪ ರವರ ವಿರುದ್ಧ ಪಾಲುವಿಭಾಗ ಕೋರಿ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಎದುರುದಾರರು ಅವರ ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. 1 ಮತ್ತು 2 ನೇ ಎದುರುದಾರರು ಐಸಿಐಸಿಐ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದಾರೆ. ಅವರು ಯಾವ ತಾರೀಖಿನಂದು ಎಷ್ಟು ಲಕ್ಷ ಸಾಲವನ್ನು ಬ್ಯಾಂಕಿನಿಂದ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಸಾಲಕ್ಕಾಗಿ ಬ್ಯಾಂಕಿನಲ್ಲಿ ಯಾವ ಜಮೀನನ್ನು ಅಡಮಾನ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಸುಮಾರು 800 ರಿಂದ 1000 ಮನೆಗಳು ಇವೆ. ನಮ್ಮ

ಗ್ರಾಮದ ಎಲ್ಲಾ ಗ್ರಾಮಸ್ಥರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಅಡಿಕೆ ಮತ್ತು ತೆಂಗಿನ ತೋಟಗಳು ಇವೆ ಎಂದರೆ ಸರಿಯಲ್ಲ. ಭರಮಸಾಗರ ಗ್ರಾಮಕ್ಕೆ ಲಗತ್ತಾಗಿ ಬೊಮ್ಮಸಮುದ್ರ ಗ್ರಾಮ ಇದೆ ಎಂದರೆ ಸರಿ. ಭರಮಸಾಗರ ಗ್ರಾಮದಲ್ಲಿ ನೂರಾರು ಎಕರೆ ತೆಂಗಿನ ತೋಟಗಳು ಇವೆ ಎಂದರೆ ಸರಿ. ಅವುಗಳನು ನೂರಾರು ವರುಷಗಳಿಂದ ಇವೆ ಎಂದರೆ ಸರಿ. ಸದರಿ ಗ್ರಾಮದ ಹತ್ತಿರದಲ್ಲಿಯೇ ರಾಣೇಕೆರೆ ಇದೆ ಎಂದರೆ ಸರಿ. ರಾಣೇಕೆರೆಯ ಹಿನ್ನಿರು ಬೊಮ್ಮಸಮುದ್ರ ಮತ್ತು ಭರಮಸಾಗರಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಅರ್ಜಿದಾರರಿಗೆ ಮತ್ತು ಎದುರುದಾರರಿಗೆ ಸೇರಿದ ಅಡಿಕೆ ತೋಟಗಳು ಇವೆ ಎಂದರೆ ಸರಿಯಲ್ಲ.

ಬೊಮ್ಮಸಮುದ್ರ ಗ್ರಾಮದಲ್ಲಿ ಬರಗಾಲದಿಂದ ಕೆರೆ ಮತ್ತು ಬಾವಿಗಳು ಬತ್ತಿಹೋಗಿವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಸರ್ವೆ ನಂಬರ್ ನ ಜಮೀನಿನಲ್ಲಿ ಬಾವಿಗಳು ಬತ್ತಿ ಹೋಗಿವೆ ಎಂದು ನನಗೆ ಹೇಳಲಾಗುವುದಿಲ್ಲ. ಆದರೆ ಯಾರ ಜಮೀನು ಎಂದು ನಾನು ಹೇಳಬಲ್ಲೆ. ನಾನು ಬೊಮ್ಮಸಮುದ್ರ ಗ್ರಾಮದ ವಾಸಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಬೊಮ್ಮಸಮುದ್ರ ಗ್ರಾಮ ಚಳ್ಳಕೆರೆಯಿಂದ 2 ಕಿಮೀ ಅಂತರದಲ್ಲಿದೆ ಎಂದರೆ ಸಾಕ್ಷಿ 5 ಕಿಮೀ ಅಂತರದಲ್ಲಿದೆ ಎಂದು ನುಡಿದಿರುತ್ತಾರೆ. ನಮ್ಮ ಗ್ರಾಮಕ್ಕೆ ಹೊಂದಿಕೊಂಡು ಮೋರಾರ್ಜಿ ಶಾಲೆ ಮತ್ತು ಕೆ ಎಸ್ ಆರ್ ಟಿ ಸಿ ಡಿಪೋ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಊರಿನಿಂದ ಐದಾರು ಕಿಮೀ ಅಂತರದಲ್ಲಿದೆ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ಎದುರುದಾರರು ಬಂದು ತಮ್ಮ ಆರ್ಥಿಕ ಸಮಸ್ಯೆಗಳನ್ನು ಹೇಳಿಕೊಂಡರು ಎಂದರೆ ಸರಿಯಲ್ಲ. ಅವರು ಸಾಲ ತೀರಿಸಲು ತೊಂದರೆ ಇದೆ ಎಂದು ನನಗೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಅವರ ತಂದೆ ಮಾಡಿದ ಸಾಲ ಮತ್ತು ಜಮೀನಿನ ಅಭಿವೃದ್ದಿಗಾಗಿ ಮಾಡಿದ ಸಾಲ ತೀರಿಸಲು ಕಷ್ಟ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಸಿಐಸಿಐ ಬ್ಯಾಂಕಿನಲ್ಲಿ ಅವರು ಸಾಲ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನವರು ಅವರಿಗೆ ಸಾಲ ಮರುಪಾವತಿ ಮಾಡಲು ನೋಟಿಸನ್ನು ನೀಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಹರಾಜಿಗೆ ಬಂದಿತ್ತು ಮತ್ತು ಆ ಕಾರಣ ನನಗೆ ಅವರು ನನಗೆ ಭೇಟಿಯಾಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಸೇರಿದ ಜಮೀನುಗಳು ಎರಡು ಕಡೆ ಇವೆ ಅವುಗಳ ಸರ್ವೆ ನಂಬರ್, ಚಕ್ಕುಬಂದಿ ಮತ್ತು ವಿಸ್ತೀರ್ಣ ಹೇಳಲಾಗುವುದಿಲ್ಲ. ಎದುರುದಾರರು ಜಮೀನು ಮಾರಾಟ ಮಾಡುವುದರ ಬಗ್ಗೆ ಗ್ರಾಮಸ್ಥರ ಸಮಕ್ಷಮ ಚರ್ಚೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗ್ರಾಮಸ್ಥರು ಯಾರು ಕೂಡ ಜಮೀನು ಖರೀದಿಗೆ ಮುಂದೆ ಬರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಜಮೀನು ಮಾರಾಟದ ಬಗ್ಗೆ ಪ್ರಚಾರ ಮಾಡಿದ್ದರು ಎಂದು ನಾನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3 ನೇ ಎದುರುದಾರರಿಗೆ 1 ಮತ್ತು 2 ನೇ ಎದುರುದಾರರಿಗೆ ಸಹಾಯ ಮಾಡಿ ಎಂದು ತಿಳಿಸಿದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ಶುದ್ಧ ಕ್ರಯಕ್ಕೆ 1 ಮತ್ತು 2 ನೇ ಎದುರುದಾರರಿಂದ ಅರ್ಜಿ ಸ್ವತ್ತನ್ನು ಖರೀದಿ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಸ್ತಿ ಹೋಗುವುದನ್ನು ತಪ್ಪಿಸಲು ಎದುರುದಾರರು ಷರಿಕ್ಕಾಗಿ ತೋರಿಕೆ ಕ್ರಯ ಪತ್ರವನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಯಾವುದೇ ಸಾಲ ಇರಲಿಲ್ಲ ಮತ್ತು 3 ನೇ ಎದುರುದಾರರಿಗೆ ಜಮೀನನ್ನು ಖರೀದಿಸುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಎದುರುದಾರರು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. ಅರ್ಜಿ ಸ್ವತ್ತಿನಲ್ಲಿ 3 ನೇ ಎದುರುದಾರರು ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಎದುರುದಾರರ ಸಂಬಂದಿಯಾದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಅರ್ಜಿ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ 1 ಮತ್ತು 2 ನೇ ಎದುರುದಾರರ ಪರ ಶ್ರೀ ಜಿ ಜಿ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ**

ನನಗೆ ಅರ್ಜಿದಾರರಾದ ರಾಮಪ್ಪ ರವರ ಪರಿಚಯವಿದೆ. ಅವರು ನಮ್ಮ ಗ್ರಾಮದವರು. ಅರ್ಜಿದಾರರು 1 ಮತ್ತು 2 ನೇ ಎದುರುದಾರರ ತಂದೆಯಾದ ಕದುರಪ್ಪ ರವರ ವಿರುದ್ಧ ಪಾಲುವಿಭಾಗ ಕೋರಿ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಎದುರುದಾರರು ಅವರ ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. 1 ಮತ್ತು 2 ನೇ ಎದುರುದಾರರು ಯಾರ ಯಾರ ಬಳಿ ಸಾಲವನ್ನು ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಆದರೆ ಅವರು ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡ ವಿಚಾರ ನನಗೆ ತಿಳಿದಿದೆ. ಅವರು ಯಾವ ತಾರೀಖಿನಂದು ಎಷ್ಟು ಲಕ್ಷ ಸಾಲವನ್ನು ಬ್ಯಾಂಕಿನಿಂದ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಸಾಲಕ್ಕಾಗಿ ಬ್ಯಾಂಕಿನಲ್ಲಿ ಯಾವ ಜಮೀನನ್ನು ಅಡಮಾನ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಸುಮಾರು 800 ರಿಂದ 1000 ಮನೆಗಳು ಇವೆ. ನಮ್ಮ ಗ್ರಾಮದ ಎಲ್ಲಾ ಗ್ರಾಮಸ್ಥರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಅಡಿಕೆ ಮತ್ತು ತೆಂಗಿನ ತೋಟಗಳು ಇವೆ ಎಂದರೆ ಸರಿ. ಸದರಿ ತೋಟಗಳು ಸಮೂರ 15-20 ವರುಷಗಳ ತೋಟಗಳಾಗಿರಬಹುದು. ಅದಕ್ಕೂ ಹಿಂದಿನ ತೋಟಗಳು ಇರುವುದಿಲ್ಲ. ಸದರಿ ತೋಟಗಳು ಚೆನ್ನಾಗಿ ನೀರು ಸಿಕ್ಕ ಕಾರಣ 15-20 ವರುಷಗಳಿಂದ ಚೆನ್ನಾಗಿ ಇದೆ ಎಂದರೆ ಸರಿ. ಭರಮಸಾಗರ ಗ್ರಾಮಕ್ಕೆ ಲಗತ್ತಾಗಿ ಬೊಮ್ಮಸಮುದ್ರ ಗ್ರಾಮ ಇದೆ ಎಂದರೆ ಸರಿ.

ಭರಮಸಾಗರ ಗ್ರಾಮದಲ್ಲಿ ನೂರಾರು ಎಕರೆ ತೆಂಗಿನ ತೋಟಗಳು ಇವೆ ಎಂದರೆ ಸರಿ. ಅವುಗಳನು ನೂರಾರು ವರುಷಗಳಿಂದ ಇವೆ ಎಂದರೆ ಸರಿ.



ಸದರಿ ಗ್ರಾಮದ ಹತ್ತಿರದಲ್ಲಿಯೇ ರಾಣೀಕೆರೆ ಇದೆ ಎಂದರೆ ಸರಿ. ರಾಣೀಕೆರೆಯ ಹಿನ್ನಿರು ಬೊಮ್ಮಸಮುದ್ರ ಮತ್ತು ಭರಮಸಾಗರಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿ. ಅರ್ಜಿದಾರರಿಗೆ ಮತ್ತು ಎದುರುದಾರರಿಗೆ ಸೇರಿದ ಅಡಿಕೆ ತೋಟಗಳು ಇವೆ ಎಂದರೆ ಸರಿಯಲ್ಲ. ಅವರ ಜಮೀನು ಬೊಮ್ಮಸಮುದ್ರ ಗ್ರಾಮಕ್ಕೆ ಲಗತ್ತಾಗಿ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಬೊಮ್ಮಸಮುದ್ರ ಗ್ರಾಮದಲ್ಲಿ ಬರಗಾಲದಿಂದ ಕೆರೆ ಮತ್ತು ಬಾವಿಗಳು ಬತ್ತಿಹೋಗಿವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಸರ್ವೆ ನಂಬರ್ ನ ಜಮೀನಿನಲ್ಲಿ ಬಾವಿಗಳು ಬತ್ತಿ ಹೋಗಿವೆ ಎಂದು ನನಗೆ ಹೇಳಲಾಗುವುದಿಲ್ಲ. ಆದರೆ ಯಾರ ಜಮೀನು ಎಂದು ನಾನು ಹೇಳಬಲ್ಲೆ. ನಾನು ಬೊಮ್ಮಸಮುದ್ರ ಗ್ರಾಮದ ವಾಸಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಚಳ್ಳಕೆರೆ ವಾಸಿಯೆಂದು ನಮೂದಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮನೆ ಮತ್ತು ಜಮೀನು ಬೊಮ್ಮಸಮುದ್ರ ಗ್ರಾಮದಲ್ಲಿ ಇದೆ ಆದರೆ ನಾನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಚಳ್ಳಕೆರೆಯಲ್ಲಿ ವಾಸವಾಗಿದ್ದೇನೆ ಎಂದು ನುಡಿದಿರುತ್ತಾರೆ. ಬೊಮ್ಮಸಮುದ್ರ ಗ್ರಾಮ ಚಳ್ಳಕೆರೆಯಿಂದ 2 ಕಿಮೀ ಅಂತರದಲ್ಲಿದೆ ಎಂದರೆ ಸಾಕ್ಷಿ 5 ಕಿಮೀ ಅಂತರದಲ್ಲಿದೆ ಎಂದು ನುಡಿದಿರುತ್ತಾರೆ. ನಮ್ಮ ಗ್ರಾಮಕ್ಕೆ ಹೊಂದಿಕೊಂಡು ಮೋರಾರ್ಜಿ ಶಾಲೆ ಮತ್ತು ಕೆ ಎಸ್ ಆರ್ ಟಿ ಸಿ ಡಿಪೋ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಊರಿನಿಂದ ಕೆ ಎಸ್ ಆರ್ ಟಿ ಸಿ ಡಿಪೋ 4 ಕಿಮೀ ಅಂತರದಲ್ಲಿದೆ ಮತ್ತು ಚಳ್ಳಕೆರೆಯಿಂದ 1 ಕಿಮೀ ಅಂತರದಲ್ಲಿದೆ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ಎದುರುದಾರರು ಬಂದು ತಮ್ಮ ಆರ್ಥಿಕ ಸಮಸ್ಯೆಗಳನ್ನು ಹೇಳಿಕೊಂಡರು ಎಂದರೆ ಸರಿಯಲ್ಲ. ಅವರು ಸಾಲ ತೀರಿಸಲು ತೊಂದರೆ ಇದೆ ಎಂದು ನನಗೆ ತಿಳಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಅವರ ತಂದೆ ಮಾಡಿದ ಸಾಲ ಮತ್ತು ಜಮೀನಿನ ಅಭಿವೃದ್ದಿಗಾಗಿ ಮಾಡಿದ ಸಾಲ ತೀರಿಸಲು ಕಷ್ಟ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಸಿಐಸಿಐ ಬ್ಯಾಂಕಿನಲ್ಲಿ ಅವರು ಸಾಲ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನವರು ಅವರಿಗೆ ಸಾಲ ಮರುಪಾವತಿ ಮಾಡಲು ನೋಟಿಸನ್ನು ನೀಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಹರಾಜಿಗೆ ಬಂದಿತ್ತು ಮತ್ತು ಆ ಕಾರಣ ನನಗೆ ಅವರು ನನಗೆ ಭೇಟಿಯಾಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಸೇರಿದ ಜಮೀನುಗಳು

ಮೂರುನಾಲ್ಕು ಕಡೆ ಇವೆ ಅವುಗಳ ಸರ್ವೆ ನಂಬರ್, ಚಕ್ಕುಬಂದಿ ಮತ್ತು ವಿಸ್ತೀರ್ಣ ಹೇಳಲಾಗುವುದಿಲ್ಲ.



ಎದುರುದಾರರು ಜಮೀನು ಮಾರಾಟ ಮಾಡುವುದರ ಬಗ್ಗೆ ಗ್ರಾಮಸ್ಥರ ಸಮಕ್ಷಮ ಚರ್ಚೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮಸ್ಥರು ಯಾರು ಕೂಡ ಜಮೀನು ಖರೀದಿಗೆ ಮುಂದೆ ಬರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಜಮೀನು ಮಾರಾಟದ ಬಗ್ಗೆ ಪ್ರಚಾರ ಮಾಡಿದ್ದರು ಎಂದು ನಾನು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3 ನೇ ಎದುರುದಾರರಿಗೆ 1 ಮತ್ತು 2 ನೇ ಎದುರುದಾರರಿಗೆ ಸಹಾಯ ಮಾಡಿ ಎಂದು ತಿಳಿಸಿದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ಶುದ್ಧ ಕ್ರಯಕ್ಕೆ 1 ಮತ್ತು 2 ನೇ ಎದುರುದಾರರಿಂದ ಅರ್ಜಿ ಸ್ವತ್ತನ್ನು ಖರೀದಿ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆಸ್ತಿ ಹೋಗುವುದನ್ನು ತಪ್ಪಿಸಲು ಎದುರುದಾರರು ಷರಿಕ್ಕಾಗಿ ತೋರಿಕೆ ಕ್ರಯ ಪತ್ರವನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಯಾವುದೇ ಸಾಲ ಇರಲಿಲ್ಲ ಮತ್ತು 3 ನೇ ಎದುರುದಾರರಿಗೆ ಜಮೀನನ್ನು ಖರೀದಿಸುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಎದುರುದಾರರು ನನ್ನೊಂದಿಗೆ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. ಅರ್ಜಿ ಸ್ವತ್ತಿನಲ್ಲಿ 3 ನೇ ಎದುರುದಾರರು ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಎದುರುದಾರರ ಸಂಬಂದಿಯಾದ ಕಾರಣ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರಿಗೆ ಅರ್ಜಿ ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು). ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು  ಮತ್ತು
ಜೆ.ಎಂ.ಎಫ್.ಸಿ.,  ಚಳ್ಳಕೆರೆ